## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ದೌರ್ಜನ್ಯದಲ್ಲಿ ಮೃತ ಹೊಂದಿದ ವ್ಯಕ್ತಿಯ ಕುಟುಂಬದ ಸದಸ್ಯರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.50,000—00 ರಿಂದ ರೂ.1.00ಲಕ್ಷಕ್ಕೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:

1) ಆದೇಶ ಸಂ: ಎಸ್‌ಡಬ್ಲ್ಯೂಎಲ್ 94 ಎಸ್‌ಎಸ್‌ಸಿ 76 ದಿನಾಂಕ:9—11—78
2) ಆದೇಶ ಸಂ: ಎಸ್‌ಡಬ್ಲ್ಯೂಎಲ್ 1 ಎಸ್‌ಎಸ್‌ಸಿ 83 ದಿನಾಂಕ:21—4—84
3) ಆದೇಶ ಸಂ: ಎಸ್‌ಡಬ್ಲ್ಯೂಎಲ್ 110 ಎಸ್‌ಎಸ್‌ಸಿ 89 ದಿನಾಂಕ:19—6—92.

ಪ್ರಸ್ತಾವನೆ:

ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಜನರ ಮೇಲೆ ಸವರ್ಣೀಯರಿಂದ ನಡೆಯುವ ದೌರ್ಜನ್ಯದಲ್ಲಿ ನೊಂದ ಸಂತ್ರಸ್ತರಿಗೆ ನೀಡಲಾಗುತ್ತಿದ್ದ ಪರಿಹಾರ ಧನವನ್ನು ಉಲ್ಲೇಖ(2) ಮತ್ತು (3) ರ ಆದೇಶಗಳಲ್ಲಿ ಹೆಚ್ಚಿಸಲಾಗಿತ್ತು.

ಸವರ್ಣೀಯರ ದೌರ್ಜನ್ಯದಲ್ಲಿ ಮೃತ ಹೊಂದಿದ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ವ್ಯಕ್ತಿಯ ಕುಟುಂಬಕ್ಕೆ ನೀಡಲಾಗುತ್ತಿರುವ ಪರಿಹಾರ ಧನವನ್ನು ಹೆಚ್ಚಿಸಲು ಉದ್ದೇಶಿಸಲಾಗಿದೆ.

ಆದೇಶ ಸಂ:ಎಸ್‌ಡಬ್ಲ್ಯೂಎಲ್ 114 ಎಸ್‌ಎಸ್‌ಸಿ 92, ಬೆಂಗಳೂರು, ದಿನಾಂಕ:12—5—93.

ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಜನರು ಮತ್ತು ಸವರ್ಣೀಯರು ಮತ್ತು ಇತರೆ ಜನರ ನಡುವೆ ನಡೆಯುವ ಘರ್ಷಣೆಗಳಲ್ಲಿ ಮೃತ ಹೊಂದಿದ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗದ ವ್ಯಕ್ತಿಯ ಕುಟುಂಬಕ್ಕೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ. 50,000 ರಿಂದ ರೂ. 1.00ಲಕ್ಷಕ್ಕೆ (ರೂಪಾಯಿ ಐವತ್ತು ಸಾವಿರದಿಂದ ಒಂದು ಲಕ್ಷಕ್ಕೆ ಮಾತ್ರ) ದಿನಾಂಕ:1—6—92 ರಿಂದ ಪೂರ್ವಾನ್ವಯವಾಗುವಂತೆ ಏರಿಸಲು ಸರ್ಕಾರವು ಹರ್ಷಿಸುತ್ತದೆ.

ಸರ್ಕಾರಿ ಆದೇಶ ಸಂ:ಎಸ್‌ಡಬ್ಲ್ಯೂಎಲ್ 110 ಎಸ್‌ಎಸ್‌ಸಿ 89 ದಿನಾಂಕ: 19—6—92 ರಲ್ಲಿನ ಉಳಿದ ಅಂಶಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

—2.

ಈ ಆದೇಶವನ್ನು ಯೋಜನೆ ಮತ್ತು ಆರ್ಥಿಕ ಇಲಾಖೆಗಳ ಅನಧಿಕೃತ ಟಿಪ್ಪಣಿ ಸಂ:ಪಿಡಿ 173 ಸಿಒಪಿ 92 ದಿನಾಂಕ:4-8-92 ಮತ್ತು ಎಫ್‌ಡಿ 1487 ಇಎಕ್ಸ್‌ಪಿ-3:92 ದಿನಾಂಕ:12-2-93ರಲ್ಲಿ ಕ್ರಮವಾಗಿ ನೀಡಿರುವ ಸಹಮತಿಯೊಡನೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಇ. ಕೃಷ್ಣಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಸಮಾಜ ಕಲ್ಯಾಣ ಇಲಾಖೆ.

ಇವರಿಗೆ,

1) ಮಹಾಲೇಖಪಾಲರು (ಅಕೌಂಟ್ಸ್ ಅಂಡ್ ಎನ್‌ಟೈಟಲ್‌ಮೆಂಟ್) (ಆಡಿಟ್-1) (ಆಡಿಟ್-2) ಕರ್ನಾಟಕ, ಬೆಂಗಳೂರು, (ತ್ರಿ ಪ್ರತಿಗಳಲ್ಲಿ)
2) ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು,
3) ಪೋಲೀಸ್ ಮಹಾನಿರ್ದೇಶಕರು, ನಾಗರೀಕ ಹಕ್ಕು ಜಾರಿ ನಿರ್ದೇಶನಾಲಯ, ಬೆಂಗಳೂರು,
4) ಎಲ್ಲಾ ವಿಭಾಗದ ವಿಭಾಗಾಧಿಕಾರಿಗಳು,
5) ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು,
6) ಎಲ್ಲಾ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಗಳು,
7) ಎಲ್ಲಾ ಜಿಲ್ಲೆಗಳ ಜಿಲ್ಲಾ ಪೋಲೀಸ್ ಅಧೀಕ್ಷಕರುಗಳು,
8) ಎಲ್ಲಾ ಜಿಲ್ಲೆಯ ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿಗಳು,
9) ಎಲ್ಲಾ ತಾಲ್ಲೂಕುಗಳ ತಹಶೀಲ್ದಾರ್‌ಗಳು,
10) ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ನಿರ್ದೇಶಕರು ಮತ್ತು ಪದನಿಮಿತ್ತ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಉಪ ಆಯುಕ್ತರು, ಕೇಂದ್ರ ಸರ್ಕಾರ, ಜಯನಗರ, ಬೆಂಗಳೂರು,
11) ಕಾರ್ಯದರ್ಶಿಗಳು, ಕೇಂದ್ರ ಸರ್ಕಾರ, ಕಲ್ಯಾಣಮಂತ್ರಾಲಯ, ನವ ದೆಹಲಿ.

ಪ್ರತಿಯನ್ನು:-

1) ಮುಖ್ಯಮಂತ್ರಿಯವರ ಕಾರ್ಯದರ್ಶಿಗಳು,
2) ಸಮಾಜ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ,
3) ಒಳಾಡಳಿತ ಇಲಾಖೆ:ಕಂದಾಯ ಇಲಾಖೆ:ಆರ್ಥಿಕ ಇಲಾಖೆ:ಯೋಜನಾ ಇಲಾಖೆ,
4) ಅಧೀನ ಕಾರ್ಯದರ್ಶಿ, ಸಚಿವ ಸಂಪುಟದ ವ್ಯವಹಾರಗಳ ಇಲಾಖೆ, ವಿಧಾನ ಸೌಧ, ಬೆಂಗಳೂರು,
5) ಪ್ರೆಸ್ ಟೇಬಲ್: ವಾರದ ರಾಜ್ಯ ಪತ್ರ,
6) ಆಂತರಿಕ ಆರ್ಥಿಕ ಸಲಹೆಗಾರರು, ಸಮಾಜ ಕಲ್ಯಾಣ ಇಲಾಖೆ,
7) ಶಾಖಾ ರಕ್ಷಾ ಕಡತ: ಹೆಚ್ಚುವರಿ ಪ್ರತಿಗಳು.

ಎಸ್‌ಎಲ್‌ಆರ್-12